# <u>ಕರ್ನಾಟಕ ಲೋಕಾಯುಕ್ತ</u>

**ಸಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1473/2021** ಬಹುಮಹಡಿಗಳ ಕಟ್ಟಡ,
**ಪಿಓ/ಎ.ಅರ್.ಇ-2 (ಮಂಡನಾಧಿಕಾರಿಗಳ ಶಾಖೆ)** ಡಾ॥ ಬಿ.ಆರ್.ಅಂಬೇಡ್ಕರ ರಸ್ತೆ,
ಬೆಂಗಳೂರು, ದಿನಾಂಕ:21/02/2021.

## <u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ</u>

ವಿಷಯ: ಸರ್ಕಾರಿ ನೌಕರರಾದ **ಶ್ರೀ. ಪವನ್ ಕುಮಾರ್, ಬಿನ್ ಲೇಟ್ ಹೆಚ್. ಪೂರ್ಣಚಂದ್ರ, ಸಹಾಯಕ ಇಂಜಿನಿಯರ್(ವಿ), ಬಿ-ಗ್ರೇಡ್, ಜೆಸ್ಕಾಂ ವಿಭಾಗ ಕಚೇರಿ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ,** ರವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

1. ಮಾನ್ಯ ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬಳ್ಳಾರಿ ವಲಯ, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಕೊಪ್ಪಳ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ **ಶ್ರೀ. ಪವನ್ ಕುಮಾರ್, ಬಿನ್ ಲೇಟ್ ಹೆಚ್. ಪೂರ್ಣಚಂದ್ರ, ಸಹಾಯಕ ಇಂಜಿನಿಯರ್ (ವಿ), ಬಿ-ಗ್ರೇಡ್, ಜೆಸ್ಕಾಂ ವಿಭಾಗ ಕಚೇರಿ, ಗಂಗಾವತಿ ತಾಲೂಕು, ಕೊಪ್ಪಳ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ), ಇವರು **ಶ್ರೀ. ರಮೇಶ, ದಿ: ಮುದುಕಪ್ಪ, ಸಾ: ಹಿರೇಬನ್ನಿಗೋಳ ಗ್ರಾಮ, ಕುಷ್ಟಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2)ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಕೊಪ್ಪಳ, ಎ.ಸಿ.ಬಿ ಪೋಲಿಸ್ ಠಾಣೆ ಮೊಕದ್ದಮೆ ಸಂ:05/2018 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೊಟಕ್ಕೆ ಕಂಡು ಬರುತ್ತದೆ.

i. ದೂರುದಾರರ ತಾಯಿಯಾದ ಕನಕವ್ವರವರ ಹೆಸರಿನಲ್ಲಿ ಹಿರೇಬನ್ನಿಗೋಳ ಗ್ರಾಮದ ಸರ್ವೆ ನಂ.79/2ರಲ್ಲಿ 01-26ಗುಂಟೆ ಜಮೀನು ಇದ್ದು, ಸದರಿ ಜಮೀನಿಗೆ ಕರ್ನಾಟಕ ಸರಕಾರದಿಂದ ಪರಿಶಿಷ್ಠ ಜಾತಿಯವರಿಗೆ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ 2016-17ನೇ ಸಾಲಿನ ಗಂಗಾ ಕಲ್ಯಾಣ ವೈಯಕ್ತಿಕ ಕೊಳವೆ ಬಾವಿ ಯೋಜನೆಯಡಿಯಲ್ಲಿ ಉಚಿತ ಕೊಳವೆ ಬಾವಿ ಕೊರೆಸಿ, ಎಲ್ಲ ನೀರಾವರಿ ಸೌಕರ್ಯ ಒದಗಿಸುವ ಯೋಜನೆ ಇದ್ದು, ಇದಕ್ಕೆ ದೂರುದಾರರ ತಾಯಿಯು ಫಲಾನುಭವಿಯಾಗಿದ್ದು, ಅಕ್ಟೋಬರ್-2017ರಲ್ಲಿ ಸರ್ಕಾರದಿಂದ ಕೊಳವೆ ಬಾವಿ ಕೊರೆಸಿದ್ದು, 02-ಇಂಚು ನೀರು ಬಿದ್ದಿರುತ್ತದೆ. ವಿದ್ಯುತ್ ಸಂಪರ್ಕ ಕಲ್ಪಿಸುವುದು ಬಾಕಿ ಇದ್ದು, ದೂರುದಾರರು ಹಾಗೂ ಅವರ ಮಾವನವರಾದ ಶ್ರೀ ಬಸಪ್ಪ ಮಾದರರವರು, ಜೆಸ್ಕಾಂ, ಗಂಗಾವತಿ ವಿದ್ಯುತ್ ಕಚೇರಿಗೆ

ಹೋಗಿ ಎದುರುದಾರರನ್ನು ಮತ್ತು ವರ್ಕ ಯುನಿಟ್ ಎ.ಇ.ಇ. ಶ್ರೀ ಖಾಜಾ ಮೊಹಿನುದ್ದೀನ್‌ರವರನ್ನು ಭೇಟಿಯಾದಾಗ, ಅವರುಗಳು 'ನಾಲ್ಕು ದಿನ ಬಿಟ್ಟು ಸ್ಥಳ ಪರಿಶೀಲನೆಗೆ ಬರುತ್ತೇವೆ' ಎಂದು ತಿಳಿಸಿರುತ್ತಾರೆ. ಅದರಂತೆ ದಿನಾಂಕ: 05/06/2018ರಂದು ಎದುರುದಾರ ಎ.ಇ. ಪವನಕುಮಾರ್‌ರು ದೂರುದಾರರ ಹೊಲಕ್ಕೆ ಬಂದು ಪರಿಶೀಲನೆ ಮಾಡಿ, 'ನಿಮ್ಮದು ಎಲ್ಲಾ ಸರಿ ಇದೆ ಟಿ.ಸಿ. ಮತ್ತು ಕಂಬಗಳನ್ನು ಕಳಿಸಲು 20,000/- ರೂಪಾಯಿ ಲಂಚ ಕೊಡಬೇಕಾಗುತ್ತದೆ ಅಂತಾ ಡಿಮ್ಯಾಂಡ್' ಮಾಡಿರುತ್ತಾರೆ. ನಂತರ ದಿನಾಂಕ: 09/06/2018ರಂದು ಬೆಳಿಗ್ಗೆ 11-29 ಗಂಟೆ ಸುಮಾರಿಗೆ ಎದುರುದಾರರು ಅವರ ಮೊಬೈಲ್ ನಂ.9480848541ನೇದ್ದರಿಂದ ದೂರುದಾರರ ಮೊಬೈಲ್ ನಂ.6361467589ನೇದ್ದಕ್ಕೆ ಕರೆ ಮಾಡಿ "ಏನಿಲ್ಲಾ ನಾಳಿ ನಾಡಿದಾಂಗ ಕಂಬ ಹುಗಿದು ಕಳಿಸಬೇಕು, ಅದಕೆ ಇನ್ನು ಮಾಡಿಯಾ ಇಲ್ಲಪ್ಪ ಅಂತಾ ಫೋನ್ ಮಾಡಿದ್ದು, ಸರ್ ಇಲ್ಲಾ ಒಬ್ಬರ ಹತ್ತಿರ ಕೇಳಿವಿ ಅದಕ್ಕೆ ಈಗ ಸದ್ಯ ಸ್ವಲ್ಪ ಕೊಡಿತೀವಿ ಅಂತಾ ಹೇಳ್ಯಾರ್ ಅದಕ ಇನ್ನಷ್ಟು ಅರೇಂಜ್‌ಮೆಂಟ್ ಆಗಬೇಕಾಗ್ಯೆತಿ, ಅದಕ ಅದೇನ ಅರಂಜೆಮೆಂಟ್ ಮಾಡಕ ಹತ್ತೀವಿ, ಸ್ವಲ್ಪ ಗಿಲ್ಪ ಅಂದರೆ ಆಗೋದಿಲ್ಲಾ ನೋಡಪ್ಪ, ಆಮೇಲೆ ನಾನು ಮಾಡುವುದಿಲ್ಲ ಅಂತಾ ಹೇಳಿದ್ದು, ಕಮ್ಮಿ ಅಂದರೆ ಹದಿನೈದರ ಇವತ್ತು ತಂದು ಕೊಡಬೇಕ ನೋಡಪಾ, ಎಷ್ಟು ಸರ್ ಹದಿನೈದು ಅದರ ಇವಾಗ ತಂದು ಕೊಡಬೇಕು ಯಾಕಂದ್ರ ಕೊಡವು ಇದಾವು ಒಳಗಡೆ, ಹೌದ್ರಾ ಸರ್" ಅಂತ್ ಮುಂತಾಗಿ ಮಾತನಾಡಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ನಂತರ ದಿನಾಂಕ: 11/06/2018ರಂದು ದೂರುದಾರರು ಹಾಗೂ ಅವರ ಮಾವನವರು ಇಬ್ಬರೂ ಕೊಪ್ಪಳಕ್ಕೆ ಬಂದು 12-40ಗಂಟೆ ಸುಮಾರಿಗೆ ಎದುರುದಾರರ ಮೊಬೈಲ್‌ಗೆ ಕಾಲ್ ಮಾಡಿ ಮಾತನಾಡಿದ್ದು, "ಸರ್ ನೀವು ಹೇಳಿದಷ್ಟು ಆಗಲ್ಲ ಸರ್ 10,000-ಸಾವಿರ ಅಷ್ಟೆ ಆದವು, ಹೂಂ ಅಷ್ಟೆ ತೆಗೆದುಕೊಂಡು ಬಾ ಸರ್ ಉಳಿದಿದ್ದು ಅದನ್ನ ಆಮೇಲೆ ನಾಡೋಣ ಬಾ" ಅಂತ ದೂರುದಾರರೊಂದಿಗೆ ಲಂಚದ ಹಣಕ್ಕೆ ಒತ್ತಾಯಿಸಿ ಮಾತನಾಡಿದ್ದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ ಹಾಗೂ ಎದುರುದಾರರು ಹಣ ಬೇಡಿರುವುದು ಸ್ಪಷ್ಟವಾಗಿ ಮುದ್ರಣವಾಗಿರುತ್ತದೆ.

ii. ದಿನಾಂಕ:11/06/2018 ರಂದು ಮಧ್ಯಾಹ್ನ 01-30 ಗಂಟೆಗೆ ದೂರುದಾರರು ಎದುರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಕೊಪ್ಪಳ ಎಸಿಬಿ ಪೋಲೀಸ್ ಠಾಣೆ ಮೊ. ಸಂ. 05/2018 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iii. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ. ಪರಮೇಶ್ವರಯ್ಯ, 2) ಶ್ರೀ. ಅಮರೇಶ ಟಿ. (ನೆರಳು ಸಾಕ್ಷಿ) ಇವರುಗಳನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯವನ್ನು ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ಕೊಟ್ಟು, ಅದರಲ್ಲಿಯ ವಿಷಯವನ್ನು ತಿಳಿದುಕೊಳ್ಳಲು ಹೇಳಿದಂತೆ, ಪಂಚರುಗಳು ದೂರಿನಲ್ಲಿಯ

ವಿಷಯವನ್ನು ಓದಿ ತಿಳಿದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆಯಂತೆ ಪಂಚರ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಮೊಬೈಲ್‌ನಲ್ಲಿದ್ದ ಧ್ವನಿ ಮುದ್ರಣವನ್ನು ಪ್ಲೇ ಮಾಡಿ, ಸದರಿ ಧ್ವನಿ ಮುದ್ರಣಗಳನ್ನು ಲ್ಯಾಪ್ ಟಾಪ್ ಮೂಲಕ ಸಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ.2,000/– ಮುಖಬೆಲೆಯ 4–ನೋಟುಗಳು ಮತ್ತು ರೂ.500/– ಮುಖಬೆಲೆಯ 4–ನೋಟುಗಳು) ಒಟ್ಟು 10,000/– ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ಪಂಚರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಪ್ತಲೀನ್ ಪೌಡರನ್ನು ಸವರಿದ್ದು, ತನಿಖಾಧಿಕಾರಿಗಳು ಪಂಚ ಸಾಕ್ಷಿ–1 ಪರಮೇಶ್ವರಯ್ಯರವರಿಗೆ ಫಿನಾಪ್ತಲೀನ್ ಪೌಡರನ್ನು ಸವರಿದ ಹಣವನ್ನು ಎಣಿಸಲು ತಿಳಿಸಿದ್ದು, ನಂತರ ಪಂಚ ಸಾಕಿ–2 ಅಮರೇಶ ಟಿ. ರವರ ಮೂಲಕ ದೂರುದಾರರ ಅಂಗ ಶೋಧನೆ ಮಾಡಿದ ನಂತರ, ಪಂಚ ಸಾಕ್ಷಿ–1 ಪರಮೇಶ್ವರಯ್ಯರವರು ಸದರಿ ಲಂಚದ ಹಣವನ್ನು ದೂರುದಾರರ ಶರ್ಟಿನ ಎಡ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಪಂಚ ಸಾಕ್ಷಿ ಪರಮೇಶ್ವರಯ್ಯರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಅಮರೇಶ ಟಿ. ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ. ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ತಮ್ಮ ಎರಡು ಕೈಗಳಿಂದ ತಲೆಯ ಕೂದಲನ್ನು ಮೇಲಕ್ಕೇರಿಸಿಕೊಳ್ಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಲು ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್‌ನ್ನು ನೀಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ, ದಿನಾಂಕ:11/06/2018ರಂದು ಮಧ್ಯಾಹ್ನ 02–25 ಗಂಟೆಯಿಂದ ಸಾಯಂಕಾಲ 04–00 ಗಂಟೆಯವರಿಗೆ ಕೊಪ್ಪಳ ಎಸಿಬಿ ಕಚೇರಿಯಲ್ಲಿ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಗೆ ಪ್ರಾಯೋಗಿಕ ಪಂಚನಾಮೆಯನ್ನು ಉಕ್ತಲೇಖನ ನೀಡಿ ಲ್ಯಾಪ್ ಟಾಪ್ ಮೂಲಕ ಬೆರಳಚ್ಚು ಮಾಡಿಸಿರುತ್ತಾರೆ.

iv. ಅದೇ ದಿನ ಅಂದರೆ ದಿನಾಂಕ:11/06/2018ರಂದು ಸಾಯಂಕಾಲ 04–05 ಗಂಟೆಗೆ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ, ದೂರುದಾರ ಮತ್ತು ಪಂಚರೊಂದಿಗೆ ಗಂಗಾವತಿ ನಗರಕ್ಕೆ ಹೋಗುವಾಗ ಮಾರ್ಗ ಮಧ್ಯದಲ್ಲಿ ಹೋಗುತ್ತಿರುವಾಗ, ಎದುರುದಾರರು ಸುಮಾರು 04–37 ಗಂಟೆಗೆ ದೂರುದಾರರ ಮೊಬೈಲ್‌ಗೆ ಕರೆ ಮಾಡಿ, ನೀನು ಆಫೀಸಿಗೆ

ಬರೋದು ಬೇಡ, ನಾನೇ ನೀನು ಇದ್ದಲ್ಲಿಗೆ ಬರುತ್ತೇನೆ, ಅಂದಾಗ ದೂರುದಾರರು ದಾರಿಯಲ್ಲಿ ಬರುತ್ತಿದ್ದೇನೆ ಅಂತಾ ತಿಳಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ದೂರುದಾರರು ಹಾಗೂ ನೆರಳು ಸಾಕ್ಷಿ ಅಮರೇಶ್ ಟಿ.ರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ, ಎದುರುದಾರರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿರುತ್ತಾರೆ. ದೂರುದಾರರು, ನೆರಳು ಸಾಕ್ಷಿರವರೊಂದಿಗೆ ಗಂಗಾವತಿಯ ಸಿ.ಬಿ.ಸರ್ಕಲ್ ನಿಂದ ಗಾಂಧಿಸರ್ಕಲ್ ರಸ್ತೆಯ ಕಡೆಗೆ ಬಂದಾಗ, ಎದುರುದಾರರು ಅವರ ಮೊಬೈಲ್ ನಂ.9480848541ನೇದ್ದರಿಂದ ದೂರುದಾರರ ಮೊಬೈಲ್ ನಂ.6361467589 ನೇದ್ದಕ್ಕೆ ಸಂಜೆ 5-00 ಗಂಟೆಗೆ ಫೋನ್ ಮಾಡಿ ಸಿಂಧನೂರು ರೋಡ್ ಕಡೆ ಬಾ ಅಂತಾ ತಿಳಿಸಿದ್ದು, ಅದರಂತೆ ದೂರುದಾರರು ಹಾಗೂ ಪಂಚಸಾಕ್ಷಿರವರು ಸಿಂಧನೂರು ರಸ್ತೆಯಲ್ಲಿರುವ ಎ.ಟಿ.ಎಂ. ಮಿಲ್ಕ್ ಪಾರ್ಲರ್ ಹತ್ತಿರ ಬಂದು ನೋಡಲಾಗಿ, ಎದುರುದಾರರು ಮಿಲ್ಕ್ ಪಾರ್ಲರ್ ಹತ್ತಿರ ಇದ್ದರು. ಆಗ ಮೂವರು ಪಾರ್ಲರ್ ಮುಂದಿರುವ ಟೀ ಪಾಯಿಂಟ್‌ನಲ್ಲಿ ಟೀ ಕುಡಿಯುತ್ತಾ ಮಿಲ್ಕ್ ಪಾರ್ಲರ್ ಪ್ಯಾಸೇಜ್‌ನಲ್ಲಿ ನಿಂತಿದ್ದಾಗ, ಎದುರುದಾರರು ಲಂಚದ ಹಣ ಕೊಡಲು ಕೇಳಿದ್ದು, ಅದರಂತೆ ದೂರುದಾರರು ಫಿನಾಫ್ತೀಲಿನ್ ಲೇಪಿತ ರೂ.10,000/- ಲಂಚದ ಹಣವನ್ನು ಪಂಚಸಾಕ್ಷಿ-2 ಅಮರೇಶ್ ಟಿ. ರವರ ಸಮಕ್ಷಮ ಎದುರುದಾರರಿಗೆ ನೀಡಿದ್ದು, ಎದುರುದಾರರು ತಮ್ಮ ಪ್ಯಾಂಟಿನ ಮುಂದುಗಡೆ ಇರುವ ಎಡಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಕೂಡಲೇ ದೂರುದಾರರು ದಾಳಿ ತಂಡದವರಿಗೆ (ತನಿಖಾಧಿಕಾರಿಗಳಿಗೆ) ಪೂರ್ವ ನಿಗದಿತ ಸನ್ನೆ ಮಾಡಿರುತ್ತಾರೆ.

V. ಆ ಸಂದರ್ಭದಲ್ಲಿ ದೂರುದಾರರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಎದುರುದಾರರು ಇದ್ದ ಸ್ಥಳಕ್ಕೆ ಬಂದು, ತಮ್ಮ ಗುರುತಿನ ಚೀಟಿ ಎದುರುದಾರರಿಗೆ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಎದುರುದಾರರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ಎದುರುದಾರರವರ ಎಡಕೈ ಬೆರಳುಗಳನ್ನು ಪ್ರತ್ಯೇಕ ಸೋಡಿಯಮ್ ಕಾರ್ಬೊನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ, ಎದುರುದಾರರು ತಮ್ಮ ಪ್ಯಾಂಟಿನ ಮುಂದುಗಡೆ ಇರುವ ಎಡ ಜೇಬಿನಲ್ಲಿದ್ದ ಲಂಚದ ಹಣವನ್ನು ಎಡಗೈಯಿಂದ ತೆಗೆದು ತನಿಖಾಧಿಕಾರಗಳವರ ಸೂಚನೆಯಂತೆ ಪಂಚ ಸಾಕ್ಷಿ-2ರವರಿಗೆ ಹಣ ನೀಡಿರುತ್ತಾರೆ. ಅವುಗಳನ್ನು ಪಂಚರು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಸದರಿ ಲಂಚದ ಹಣದ ಬಗ್ಗೆ ಎದುರುದಾರರಲ್ಲಿ ವಿಚಾರಿಸಿದಾಗ, ಎದುರುದಾರರು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ. ನಂತರ ತನಿಖಾಧಿಕಾರಿಗಳು ದೂರುದಾರರಿಂದ ಮತ್ತು ನೆರಳುಸಾಕ್ಷಿರವರಿಂದ ಪ್ರಕರಣದ ವಿದ್ಯಾಮಾನವನ್ನು

ತಿಳಿದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಬದಲೀ ಪ್ಯಾಂಟ್ ವ್ಯವಸ್ಥೆ ಮಾಡಿ, ಲಂಚದ ಹಣವನ್ನು ಇಟ್ಟಿದ್ದ ಪ್ಯಾಂಟನ್ನು ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದಿರುತ್ತಾರೆ. ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿರುತ್ತಾರೆ.

vi. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ "ಎದುರುದಾರರು ಪ್ರಭಾರಿ ಹುದ್ದೆಯ ಸಹಾಯಕ ಇಂಜಿನಿಯರ್ (ವಿ) ಕಾಮಗಾರಿ ಘಟಕ, ಕುಷ್ಟಗಿ ಉಪ-ವಿಭಾಗದಲ್ಲಿ ಪ್ರಭಾರಿಯಾಗಿ ಕೆಲಸ ಮಾಡುತ್ತಿದ್ದಾಗ, ತನಗೆ ದೂರುದಾರರು ಅವರ ಜಮೀನಿನಲ್ಲಿ ಪರಿವರ್ತಕವನ್ನು ಮತ್ತು ಕಂಬಗಳನ್ನು ಹಾಕಿಕೊಡಲು 10,000/- ರೂ.ಗಳನ್ನು ಸಿ.ಬಿ.ವೃತ್ತ ಗಂಗಾವತಿಯಲ್ಲಿ ರಾಯಚೂರು ರೋಡಿನ ಮಿಲ್ಕ ಪಾರ್ಲರ್ ಮುಂದೆ ತಾನು ನಿಂತಾಗ ಬಲವಂತವಾಗಿ ಕೊಟ್ಟಿರುತ್ತಾನೆ. ಆದರೆ ನಾನಾಗೀ ದೂರುದಾರರಿಗೆ ಹಣವನ್ನು ಕೊಡಲು ಕೇಳಿರುವುದಿಲ್ಲ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ವಿಚಾರಿಸಿದಾಗ, ದೂರುದಾರರು ಎದುರುದಾರರ ಸಮಜಾಯಿಷಿಯನ್ನು ಅಲ್ಲಗೆಳೆದು, "ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಉದ್ದೇಶಪೂರ್ವಕವಾಗಿ ಲಂಚದ ಹಣವನ್ನು ದಿನಾಂಕ: 11/06/2018 ರಂದು ಸಂಜೆ 5.25 ಗಂಟೆಯ ಸುಮಾರಿಗೆ ನಂದಿನಿ ಮಿಲ್ಕ ಪಾರ್ಲರ್ ಮುಂದಿನ ಪ್ಯಾಸೇಜದಲ್ಲಿ ಟೀ ಕುಡಿಯುತ್ತಿದ್ದಾಗ ಪಂಚರ ಸಮಕ್ಷಮ ಪಡೆದಿರುತ್ತಾರೆ", ಎಂದು ಹೇಳಿರುತ್ತಾರೆ. ತದನಂತರ ತನಿಖಾಧಿಕಾರಿಗಳು ಪಂಚ-2ರವರನ್ನು ಎದುರುದಾರರ ಸಮಜಾಯಿಷಿಯ ಬಗ್ಗೆ ಕೇಳಲಾಗಿ, ಅವರು ಎದುರುದಾರರ ಸಮಜಾಯಿಷಿಯನ್ನು ಅಲ್ಲಗೆಳೆದು, ದೂರುದಾರರ ಕೆಲಸಕ್ಕಾಗಿ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಉದ್ದೇಶಪೂರ್ವಕವಾಗಿ ಲಂಚದ ಹಣವನ್ನು ಎದುರುದಾರರು ಪಡೆದಿರುತ್ತಾರೆ ಎಂದು ಹೇಳಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ದೂರುದಾರರ ತಾಯಿಗೆ ಸಂಬಂಧಿಸಿದ ವಿದ್ಯುತ್ ಸಂಪರ್ಕ ಕಲ್ಪಿಸುವುದರ ಕಡತದ ಬಗ್ಗೆ ಎದುರುದಾರರನ್ನು ಕೇಳಲಾಗಿ, ಎದುರುದಾರರು ಸದರಿ ದಾಖಲಾತಿಗಳು ವಿಭಾಗೀಯ ಕಾಮಗಾರಿ ಘಟಕ, ಜೆಸ್ಕಾಂ ಗಂಗಾವತಿ ಕಚೇರಿಯಲ್ಲಿದ್ದು, ಅದನ್ನು ತರಿಸಿದ್ದು, ಅದನ್ನು ತನಿಖಾಧಿಕಾರಿಗಳು ಜೆರಾಕ್ಸ್ ಮಾಡಿಸಿ ಶ್ರೀ. ಖಾಜಾಮೊಹಿದ್ದೀನ್, ಎ.ಇ.ಇ.ರವರಿಂದ ಧೃಢೀಕರಿಸಿಕೊಂಡು ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಲು ನೀಡಿದ್ದ ವಾಯ್ಸ್ ರೆಕಾರ್ಡ್‌ನ್ನು ದೂರುದಾರರನ್ನು ಹಾಜರುಪಡಿಸಲು ಕೇಳಿದಾಗ, ದೂರುದಾರರು ಎಲ್ಲರ ಸಮಕ್ಷಮ ಹಾಜರುಪಡಿಸಿದ್ದು, ಅದನ್ನು ಕೇಳಲಾಗಿ, ಅದರಲ್ಲಿ ಯಾವುದೂ ರೆಕಾರ್ಡ್ ಆಗಿರಲಿಲ್ಲ. ದೂರುದಾರರು ಗಡಿಬಿಡಿಯಲ್ಲಿ ವಾಯ್ಸ್ ರೆಕಾರ್ಡ್‌ನ್ನು ಆನ್ ಮಾಡಿರಲಿಲ್ಲ ಅಂತಾ ತಿಳಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ವಿವಿಧ ಹಂತಗಳಲ್ಲಿ ಫೋಟೋಗಳನ್ನು

ತೆಗೆಯಿಸಿ, ದಿನಾಂಕ: 11/06/2018 ರಂದು ಸಂಜೆ 05-40 ಗಂಟೆಯಿಂದ ರಾತ್ರಿ 09-00 ಗಂಟೆಯವರೆಗೆ ಗಂಗಾವತಿ ನಗರದ ಸಿ.ಬಿ. ಸರ್ಕಲ್ ಹತ್ತಿರದ ಗಂಗಾವತಿ-ಸಿಂಧನೂರು ರಸ್ತೆಯ ಪಕ್ಕದಲ್ಲಿರುವ ನಂದಿನಿ ಕ್ಷೀರ ಮಳಿಗೆಯ ಒಳಗಡೆ ಲ್ಯಾಪ್ ಟಾಪ್‌ನಲ್ಲಿ ತನಿಖಾಧಿಕಾರಿಗಳು ಟ್ರ್ಯಾಪ್ ಮಹಜರನ್ನು ಉಕ್ತಲೇಖನ ನೀಡಿ ತಮ್ಮ ಸಿಬ್ಬಂದಿಯಿಂದ ಬೆರಳಚ್ಚು ಮಾಡಿಸಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ಮಾದರಿ ಧ್ವನಿಗಳನ್ನು ಸಂಗ್ರಹಿಸುವ ಅವಶ್ಯಕತೆಯಿದ್ದು, ಅದೇ ದಿನ ರಾತ್ರಿ ಊಟವಾದ ನಂತರ ಎದುರುದಾರರ ಹಾಗೂ ದೂರುದಾರರ ಟ್ರ್ಯಾಪ್ ಪೂರ್ವದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ, ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಸಿಡಿಗಳನ್ನು ತಯಾರಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಟ್ರ್ಯಾಪ್ ಪೂರ್ವದಲ್ಲಿ ಅಂದರೆ ದಿ:09/06/2018 ಮತ್ತು 11/06/2018ರಂದು ದೂರುದಾರರು ಎದುರುದಾರರೊಂದಿಗೆ ನಡೆಸಿದ ಸಂಭಾಷಣೆಯನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ್ದು, ಅದರ ಮೆಮೊರಿ ಕಾರ್ಡ್‌ನ್ನು ಲ್ಯಾಪ್ ಟಾಪ್ಗೆ ಹಾಕಿ, ಅದರಲ್ಲಿರುವ ಸಂಭಾಷಣೆಯನ್ನು ಪ್ಲೇ ಮಾಡಿ ಎದುರುದಾರರ ಮೇಲಾಧಿಕಾರಿಗಳಾದ ಶ್ರೀ. ಖಾಜಾಮೊಹಿದ್ದೀನ್, ಎ.ಇ.ಇ. ರವರಿಗೆ ಕೇಳಿಸಿದಾಗ, ಅವರು 'ಎದುರುದಾರರು ನನ್ನ ಅಧೀನದಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರ ಧ್ವನಿಯನ್ನು ಪ್ರತಿದಿನ ಕೇಳುತ್ತಿರುವುದರಿಂದ ಅವರ ಧ್ವನಿಯನ್ನು ನಾನು ಗುರುತಿಸಿರುತ್ತೇನೆ' ಎಂದು ತಿಳಿಸಿರುತ್ತಾರೆ. ದೂರುದಾರರ ಧ್ವನಿಯನ್ನು ಅವರ ಸಂಬಂಧಿಕರಾದ ಬಸಪ್ಪ ಬಿನ್ ಮರಿಯಪ್ಪ ಮಾದರ, ಇವರು ಗುರುತಿಸಿರುತ್ತಾರೆ. ಈ ಬಗ್ಗೆ ರಾತ್ರಿ 10-30 ರಿಂದ 11-50ರವರೆಗೆ ಗಂಗಾವತಿ ನಗರದ ಹಳೆಯ ಪ್ರವಾಸಿ ಮಂದಿರದಲ್ಲಿ ಪಂಚರ ಸಮಕ್ಷಮ ಪಂಚನಾಮೆ ತಯಾರಿಸಿರುತ್ತಾರೆ ಹಾಗೂ ಎದುರುದಾರರನ್ನು ತನಿಖಾಧಿಕಾರಿಗಳು ದಸ್ತಗಿರಿ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ.

ix. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಫ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆ ತೋರಿಸದೆ, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3 (1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

x. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು, ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಎದುರುದಾರರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಎದುರುದಾರರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ದಿನಾಂಕ: 08/10/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ದೂರು ಸತ್ಯಕ್ಕೆ ದೂರವಾಗಿದ್ದು, ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ, ದೂರುದಾರರು ನನ್ನ ಆಗದವರ ಮಾತು ಕೇಳಿ ನನ್ನ ಮೇಲೆ ಸುಳ್ಳು ದೂರನ್ನು ನೀಡಿರುತ್ತಾರೆ, ಅದರಂತೆ ತನಿಖಾಧಿಕಾರಿಗಳು ಕೊಟ್ಟಿ ದಾಖಲೆಗಳನ್ನು ತಯಾರಿಸಿರುತ್ತಾರೆ, ನಾನು ಲಂಚ ಅಂತಾ ಹಣ ಪಡೆದುಕೊಂಡಿರುವುದಿಲ್ಲ. ತನಿಖಾಧಿಕಾರಿಗಳು ನನ್ನ ಮೇಲೆ ಮಾನಸಿಕ ಒತ್ತಡ ಹೇರಿ ನನಗೆ ಉಕ್ತಲೇಖನ ನೀಡಿ ಒಂದು ಸಮಜಾಯಿಷಿಯನ್ನು ಬರೆಯಿಸಿಕೊಂಡಿರುತ್ತಾರೆ, ಸದರಿ ಸಮಜಾಯಿಷಿಯನ್ನು ನಾನು ಸ್ವಖುಷಿಯಿಂದ ಬರೆದುಕೊಟ್ಟಿರುವುದಿಲ್ಲ. ಶ್ರೀಮತಿ ಕನಕವ್ವ, ಹರಿಜನ್ ರವರಿಗೆ ಸಂಬಂಧಿಸಿದಂತೆ 2016–17ನೇ ಸಾಲಿನ ಗಂಗಾ ಕಲ್ಯಾಣ ವೈಯಕ್ತಿಕ ಕೊಳವೆ ಬಾವಿಗೆ ಸಂಬಂಧಪಟ್ಟಂತಹ ಅನುಮೋದನೆ ಪಡೆದಿರುವ ಯಾವುದೇ ಕಡತಗಳು ನನ್ನ ಬಳಿ ಬಾಕಿ ಇರುವುದಿಲ್ಲ. ಶ್ರೀಮತಿ ಕನಕವ್ವ, ಹರಿಜನ್, ಇವರು 2015–16ನೇ ಸಾಲಿನಲ್ಲಿ ತಮ್ಮ ಜಮೀನಿನಲ್ಲಿ ಕೊರೆಯಿಸಿದ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕವನ್ನು 2016–17ನೇ ಸಾಲಿನಿಂದ ಉಚಿತವಾಗಿ ನೀಡಲಾಗಿರುತ್ತದೆ. ದೂರುದಾರ ಶ್ರೀ. ರಮೇಶ್ ಇವರು ನನ್ನ ಹತ್ತಿರ ಬಂದು 2ನೇ ಬಾರಿಗೆ ವಿದ್ಯುತ್ ಸಂಪರ್ಕವನ್ನು ಉಚಿತವಾಗಿ ಪಡೆಯಬಹುದೇ ಎಂದು ಕೇಳಿದಾಗ, ನಾನು ಆ ರೀತಿ ಉಚಿತ ಸಂಪರ್ಕ ನೀಡಲು ಬರುವುದಿಲ್ಲವೆಂದು ತಿಳಿಸಿದೆ. ಆ ಕಾರಣದಿಂದಾಗಿ, ನನ್ನ ಮೇಲೆ ಸಿಟ್ಟಾಗಿ ನನ್ನನ್ನು ದ್ವೇಷಿಸುವವರ ಮಾತನ್ನು ಕೇಳಿ ತಮ್ಮ ಸ್ವಾರ್ಥ ಸಾಧನೆಗಾಗಿ ಶ್ರೀ. ರಮೇಶ್ ಇವರು ನನ್ನ ಮೇಲೆ ಸುಳ್ಳು ಆಪಾದನೆ ಮಾಡಿರುತ್ತಾರೆ. ನಾನು ಈವರೆವಿಗೂ ಯಾವುದೇ ರೀತಿಯಿಂದ ಕರ್ತವ್ಯ ಲೋಪ ಮಾಡಿರುವುದಿಲ್ಲ. ತನಿಖಾಧಿಕಾರಿಗಳು ಸಲ್ಲಿಸಿರುವ ಆಪಾದನಾ ಪತ್ರದ ಮೇಲೆ ಕೆಲವೇ ದಿನಗಳಲ್ಲಿ ನ್ಯಾಯಾಲಯದಲ್ಲಿ ನನ್ನ ಮೇಲೆ ವಿಚಾರಣೆ ಪ್ರಾರಂಭವಾಗುವ ಸಾಧ್ಯತೆಗಳಿರುತ್ತವೆ. ಈ ಹಂತದಲ್ಲಿ ಇಲಾಖಾ ವಿಚಾರಣೆ ಪ್ರಾರಂಭಿಸಿದರೆ, ನನಗೆ ಸರಿಯಾಗಿ ಸ್ವ-ರಕ್ಷಣೆ ಮಾಡಿಕೊಳ್ಳಲು ಅವಕಾಶ ಸಿಗುವುದಿಲ್ಲ. ಈ ಕಾರಣ ಸದ್ಯಕ್ಕೆ ನನ್ನ ಮೇಲೆ ಇಲಾಖಾ ವಿಚಾರಣೆ ಜರುಗಿಸುವ ಕುರಿತಾಗಿ ಶಿಫಾರಸ್ಸು ಮಾಡಬಾರದೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ" ಎಂದು ಮುಂತಾಗಿ ಸಮಜಾಯಿಷಿಯನ್ನು ನೀಡಿರುತ್ತಾರೆ.

3) ಎದುರುದಾರರು ಸಲ್ಲಿಸಿರುವ ಸಮಜಾಯಿಷಿಯನ್ನು ತನಿಖಾ ಕಾಲದಲ್ಲಿ ಸಂಗ್ರಹಿಸಲಾದ, ದಾಖಲಾತಿಗಳು ಮತ್ತು ಹೇಳಿಕೆಗಳೊಂದಿಗೆ ಪರಿಶೀಲಿಸಲಾಗಿದ್ದು, ಎದುರುದಾರರು ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುವುದು ಕಂಡುಬರುತ್ತದೆ. ಎದುರುದಾರರು ನೀಡಿರುವ ಉತ್ತರದಲ್ಲಿ ಅವರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

4) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಫಿರ್ಯಾದುದಾರರಿಂದ ಲಂಚದ ಹಣವನ್ನು ಪಡೆದುಕೊಂಡಿದ್ದು, ತನ್ಮೂಲಕ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ

ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

5) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ.

6) ಹಾಗೆಯೇ ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

21/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.